ಯಾರಾದರೂ ಸಾಬೀತು ಮಾಡಿದ್ದಲ್ಲಿ , ಅಂತಹ ಅಧಿಕಾರಿ: ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

ಇ) ನಿಯಮಾನುಸಾರವಾಗಿ ಹಣ ಬಿಡುಗಡೆ ಆದೇಶವು ಅಸಿಂದುವಾಗಿದೆ.

459(754) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗದಗ ಜಿಲ್ಲೆ ಮುಂಡರಗಿ ಕ್ಷೇತ್ರದಲ್ಲಿನ ಪಶುಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸಲಾಗಿದೆಯೇ;

ಆ) ಹೊಸದಾಗಿ ಪಶುಚಿಕಿತ್ಸಾಲಯಗಳನ್ನು ಸರ್ಕಾರ ಮಂಜೂರು ಮಾಡುವುದೇ;

ಇ) ಮುಂಡರಗಿ ಪಶು ಆಸ್ಪತ್ರೆಯು ಕಟ್ಟಡ ಅರ್ಧಕ್ಕೆ ನಿಂತಿರುವುದನ್ನು ಪೂರ್ಣಗೊಳಿಸಲಾಗುವುದೇ?

ಶ್ರೀ ಮಿರಾಜುದ್ದೀನ್ ಎಸ್. ಪಟೀಲ್(ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ಇಲ್ಲ

ಆ) ಹೊಸ ಪಶು ಚಿಕಿತ್ಸಾಲಯಗಳನ್ನು ಮಂಜೂರು ಮಾಡುವ ಕಾರ್ಯಕ್ರಮ ಸದ್ಯಕ್ಕೆ ಇರುವುದಿಲ್ಲ.

ಇ) ಎಸ್. ಜಿ. ಎಸ್. ವೈ ಯೋಜನೆಯಡಿಯಲ್ಲಿ 2004–05ನೇ ಸಾಲಿನಲ್ಲಿ ರೂ.4.00ಲಕ್ಷ ವಂಟನ ಬಿಡುಗಡೆ ಮಾಡಿದ್ದು ಕಟ್ಟಡದ ಕಾಮಗಾರಿ ಪ್ರಗತಿಯಲ್ಲಿದೆ.

460(645) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯ ಭಾಲ್ಕಿ ಕ್ಷೇತ್ರದಲ್ಲಿ ಹೊಸ ಪಶುಚಿಕಿತ್ಸಾಲಯಗಳ ಸ್ಥಾಪನೆ ಬಗ್ಗೆ ಬೇಡಿಕೆ ಇದೆಯೇ;

ಆ) ಹೊಸ ಪಶು ಚಿಕಿತ್ಸಾಲಯಗಳನ್ನು ಎಂದಿನಂತೆ ಸ್ಥಾಪಿಸಲಾಗುವುದು?

ಶ್ರೀ ಮಿರಾಜುದ್ದೀನ್ ಎಸ್.ಪಟೀಲ್(ಪಶುಸಂಗೋಪನೆ ಮತ್ತು ವಕ್ಫ ಸಚಿವರು) :

ಅ) ಇದೆ

ಆ) ಹೊಸ ಪಶು ಚಿಕಿತ್ಸಾಲಯಗಳನ್ನು ಸ್ಥಾಪಿಸುವ ಕಾರ್ಯಕ್ರಮ ಪ್ರಸ್ತುತ ಇರುವುದಿಲ್ಲ.

461(647) ಶ್ರೀ ರಘುವತಿಭಟ್ .ಕೆ.(ಉಡುಪಿ) ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸಣ್ಣಕೈಗಾರಿಕೆಗಳಿಗೆ ಈ ಸಾಲಿನಲ್ಲಿ ಎಷ್ಟು ಸಬ್ಸಿಡಿ ಹಣ ಬಿಡಿಗಡೆಗೊಳಿಸಲಾಗಿದೆ (ಪಟ್ಟಿ ನೀಡುವುದು):

ಆ) ಬಾಕಿ ಉಳಿದ ಸಣ್ಣ ಕೈಗಾರಿಕೆಗಳಿಗೆ ಹಣವನ್ನು ಯಾವಾಗ ಬಿಡುಗಡೆ ಗೊಳಿಸಲಾಗುವುದು.

ಇ) ಸಣ್ಣ ಕೈಗಾರಿಕಾಭಿವೃದ್ಧಿಗೆ ಸರ್ಕಾರವು ಯಾವುದಾದರೂ ಹೊಸ ಯೋಜನೆಯನ್ನು ಹಾಕಿಕೂಂಡಿದೆಯೇ;

ಈ) ಹಾಕಿಕೂಂಡಿದಲ್ಲಿ ಅದು ಯಾವ ಯೋಜನೆ?

ಶ್ರೀ ಪಿ.ಜಿ.ಆರ್. ಸಿಂಧ್ಯ(ಭಾರಿ, ಮಧ್ಯಮ ಹಾಗೂ ಸಣ್ಣಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) 2004–05ನೇ ಸಾಲಿನಲ್ಲಿ ರಾಜ್ಯ ಸಹಾಯಧನ ಮಂಜೂರಾದ 6562 ಘಟಕಗಳಿಗೆ ಶೇ. 50ರಂತೆ ರೂ.77.59 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. (ಜಿಲ್ಲಾವಾರು ಪಟ್ಟಿ ಲಗುತ್ತಿಸಿದೆ.)

ಆ) ಬಾಕಿ ಉಳಿದ ಸಹಾಯಧನವನ್ನು 2004–05 ಹಾಗೂ 2005–06ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗುವುದು.

ಇ) ಹೌದು.

ಈ) ಕೈಗಾರಿಕಾ ಬೆಳೆವಣಿಗೆಯನ್ನು ಉತ್ತೇಜಿಸಲು 2001–06 ಕೈಗಾರಿಕಾ ನೀತಿಯಲ್ಲಿ ಕೆಳಕಂಡ ಅಂಶಗಳಿಗೆ ಹೆಚ್ಚಿನ ಒತ್ತು ನೀಡಲಾಗಿದೆ.

01) ತಂತ್ರಜ್ಞಾನ ಉನ್ನತೀಕರಣ
02) ಮಾನವ ಸಂಪನ್ಮೂಲ ಅಭಿವೃದ್ಧಿ
03) ಮೂಲಭೂತ ಸೌಕರ್ಯಗಳ ನೆರವು
04) ವ್ಯವಹಾರ ಪರಿಸರದ ಅನಿಯಂತ್ರಣ
5) ಐ. ಎಸ್. ಒ. 9000, ಐ. ಎಸ್.ಒ.1400 ಪ್ರಮಾಣ ಪತ್ರ ಪಡೆದ ಘಟಕಗಳಿಗೆ ಉತ್ತೇಜನ ನೀಡುವುದು
6) ಸಣ್ಣ ಕೈಗಾರಿಕಾ ಕ್ಷೇತ್ರಕ್ಕೆ ಮಾರಾಟ ಸಹಾಯ
7) ಸಿಂಗಲ್ ವಿಂಡೋ ವ್ಯವಸ್ಥೆಯನ್ನು ಸರಳೀಕರಿಸುವುದು
8) ಉತ್ತೇಜನ ಮತ್ತು ರಿಯಾಯಿತಿಗಳು
9) ರಫ್ತು ವಿಶೇಷ ರಿಯಾಯಿತಿಗಳು
10) ರೋಗಗ್ರಸ್ಥ ಕೈಗಾರಿಕೆಗಳ ಪುನಶ್ಚೇತನ/ಪುನಸ್ಸಜ್ಜೀಕರಣ

ANNEXURE

DETAILS OF TOTAL NUMBER OF UNITS SENT TO KSFC FOR RELEASE OF 50% SUBSIDY BASED ON DISTRICT COMMITEE REPORTS AS ON 27.12.2004

Sl. No	Name of the District	No. of units	50% of the sanctioned amount released
01	Bagalkot	172	15235100
02	Bangalore(Rural)	232	31555648

240 LEGISLATIVE ASSEMBLY

03	Bangalore(Urban)	396	114838973
04	Belgaum	682	50393871
05	Bellary	232	33572725
06	Bijapur	114	12170655
07	Chamarajnagar	53	2565195
08	Chikmangalur	109	9361465
09	Chitradurga	133	15044637
10	Dhakshinakannada	459	56537680
11	Davanagere	146	16145850
12	Dharwad	309	4351150
13	Gadag	178	7312278
14	Gulgarga	204	31453503
15	Hassan	273	23914400
16	Haveri	102	7022650
17	Karwar	579	52635375
18	Kodagu	54	8866625
19	Kolar	184	23392387
20	Koppal	102	18100850
21	Mandya	140	11855025
22	Mysore	350	48193825
23	Raichur	100	12179000
24	Shimoga	172	15535375
25	Tumkur	492	55988650
26	Udupi	547	55174855
27	Bidar	48	3818180
	Total	**6562**	**775915827**